ಕೆ. ಶಿವಲಿಂಗಪ್ಪ ಹಂದಿಹಾಳು ಮಕ್ಕಳ ಸಾಹಿತ್ಯದ ಕಡುಮೋಹಿ. ಎರಡು ದಶಕಗಳಿಂದ ಮಕ್ಕಳಿಗಾಗಿ ಬರೆಯುತ್ತಿರುವ, ಬಿರುಬಿಸಿಲಿನ ಬಳ್ಳಾರಿ ನೆಲದ ಈ ಮೇಷ್ಟ್ರು, ಸಂಘಟನೆಯಲ್ಲೂ ತೊಡಗಿಕೊಂಡಿರುವವರು. ಕಥೆ, ಕವಿತೆ, ಕಾದಂಬರಿ, ಅನುವಾದ – ಎಲ್ಲ ಪ್ರಕಾರಗಳಲ್ಲೂ ಮಕ್ಕಳಿಗೆ ಹೊಸರುಚಿ ಉಣಿಸಲು ಪ್ರಯತ್ನಿಸುತ್ತಿರುವವರು. 'ದಿ ಯಂಗ್ ಸೈಂಟಿಸ್ಟ್', 'ಟಿಫಿನ್ ಬಾಕ್ಸ್', 'ಶಾವೋಲಿನ್', 'ಅವಳಿ' ಅವರ ಕೆಲವು ಚರ್ಚಿತ ಕೃತಿಗಳು. 'ನೋಟ್ ಬುಕ್' ಕಥಾ ಸಂಕಲನಕ್ಕಾಗಿ 2025ರ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಾಲ ಸಾಹಿತ್ಯ ಪುರಸ್ಕಾರಕ್ಕೆ ಪಾತ್ರರಾಗಿರುವ ಶಿವಲಿಂಗಪ್ಪನವರೊಂದಿಗೆ ಅವರ ಬರಹ ಹಾಗೂ ಮಕ್ಕಳ ಸಾಹಿತ್ಯದ ಸಾಧ್ಯತೆಗಳ ಬಗ್ಗೆ ನಡೆಸಿದ ಮಾತುಕತೆಯ ಸಾರಾಂಶ ಇಲ್ಲಿದೆ.

**◆ ನಿಮ್ಮ 'ನೋಟ್‌ಬುಕ್' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಬಾಲ ಸಾಹಿತ್ಯ ಪುರಸ್ಕಾರ ಸಂದಿದೆ. ಈ ಗೌರವವನ್ನು ಹೇಗೆ ಸ್ವೀಕರಿಸುವಿರಿ?**

ಕೃತಿಯ ಲೇಖಕನಾಗಿ ಸಹಜವಾಗಿ ಖುಷಿ ಇದೆ. ಇದು ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಕೊಡಲಾಗುವ ಬಹುದೊಡ್ಡ ಪ್ರಶಸ್ತಿ. ಇಂಥದ್ದೊಂದು ಪ್ರಶಸ್ತಿ ನನ್ನ ಕೃತಿಗೆ, ಅದರಲ್ಲೂ ಬಳ್ಳಾರಿ ಮೂಲೆಯಲ್ಲಿರುವ ಹಂದಿಹಾಳು ಗ್ರಾಮದ ಹುಡುಗನಿಗೆ ದೊರಕಿದೆ. ಹಾಗಾಗಿ, ಈ ಪ್ರಶಸ್ತಿಯ ಖುಷಿಯನ್ನು ವೈಯಕ್ತಿಕವಾಗಿ ಸ್ವೀಕರಿಸುವ ಬದಲು ನನ್ನ ನೆಲದ ಎಲ್ಲಾ ಲೇಖಕರೊಂದಿಗೆ ಹಂಚಿಕೊಳ್ಳುವೆ. ಹಾಗೆಯೇ ಸಾಂಸ್ಕೃತಿಕವಾಗಿ ಶ್ರೀಮಂತವಾದ ಬಳ್ಳಾರಿ ಪ್ರದೇಶಕ್ಕೆ ಅಂಟಿಸಿರುವ ಅಪಕೀರ್ತಿ, ಅಪವ್ಯಾಖ್ಯಾನಗಳನ್ನು ತೊಡೆದುಹಾಕಲು ಈ ಪ್ರಶಸ್ತಿಯನ್ನು ಬಳಸಿಕೊಳ್ಳುವೆ.

**◆ ಬಾಲ್ಯ ಕಾಲದ ಓದು, ಅನುಭವಗಳು ನಿಮ್ಮ ಮಕ್ಕಳ ಸಾಹಿತ್ಯದ ಬರವಣಿಗೆಗೆ ಹೇಗೆ ಪ್ರೇರಣೆಯನ್ನು ನೀಡಿದವು?**

ನನ್ನ ಇಂದಿನ ಬರವಣಿಗೆಗೆ ಬಾಲ್ಯವೇ ಬಲ. ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲ್ಲೂಕಿನ ಒಂದು ಸಣ್ಣ ಹಳ್ಳಿಯಲ್ಲಿ ಜನಿಸಿದ ನನಗೆ ಆ ಹಳ್ಳಿಯೇ ವಿಶ್ವವಾಗಿತ್ತು. ನಾನು ಸಣ್ಣವನಿದ್ದಾಗ ಪುಸ್ತಕಗಳಲ್ಲಿನ ಬಣ್ಣ ಬಣ್ಣದ ಚಿತ್ರಗಳನ್ನು ನೋಡಲಿಕ್ಕೆ ನಮ್ಮೂರ ಗ್ರಂಥಾಲಯಕ್ಕೆ ಹೋಗುತ್ತಿದ್ದೆ. ಕಥೆಯನ್ನು ಓದದೆ, ಬರೀ ಚಿತ್ರಗಳನ್ನೇ ತಿರುವಿ ಹಾಕುತ್ತಿದ್ದೆ. ಆ ಚಿತ್ರಗಳು ನನ್ನೊಳಗಿನ ಕಲ್ಪನೆಗೆ ಕಸುವು ಕೊಟ್ಟವು. ನಿಧಾನಕ್ಕೆ ತುಂಬಾ ಇಷ್ಟವಾದ ಚಿತ್ರಗಳಿರುವ ಪುಸ್ತಕಗಳನ್ನು ಓದಲು ಪ್ರಾರಂಭಿಸಿದೆ. ನಾವೆಲ್ಲಾ ಹುಡುಗರಿದ್ದಾಗ ಆಡಿದ ಮರಕೋತಿ, ಚಿನ್ನಿದಾಂಡು, ಕಬಡ್ಡಿ, ಶಿಳ್ಳಾಕರ ಬುಡ್ಡಿ, ಗೋಲಿ, ಗಜ್ಜುಗದ ಆಟಗಳು; ನೇರಳೆ, ದ್ರಾಕ್ಷಿ, ದಾಳಿಂಬೆ, ಕೌಳೆ, ತೊಂಡೆಹಣ್ಣು, ಜಾಮಣ್ಣು, ಪಾಪಸುಕಳ್ಳಿ ಹೀಗೆ ತಿಂದ ಅದೆಷ್ಟೋ ಹಣ್ಣುಗಳು; ಸೌತೆಕಾಯಿ, ಟೊಮೆಟೊ, ತೊಗರಿ ಬುಡ್ಡೆ, ಹಲಸಂದಿ, ಹೆಸರು, ನೆಲಗಡಲೆ ಅಲ್ಲದೇ ಬಿಂಗೇರ ರಾಮಾಯಣ, ಶಿವಪ್ಪ ತಾತ ಸಂಘದ ಸಾಮಾಜಿಕ ನಾಟಕ, ಈಶ್ವರ ಗುಡಿ ಮುಂದಿನ ಬಯಲಾಟ ಹೀಗೆ ಬಾಲ್ಯದಲ್ಲಿ ಕಂಡ ಅದೆಷ್ಟೋ ಪ್ರಸಂಗಗಳು, ಪಟ್ಟ ಪಾಡುಗಳು– ಎಲ್ಲವೂ ನನ್ನ ಬರವಣಿಗೆಗೆ ಬಲವಾಗಿವೆ. ಹಾಗೆ ನೋಡಿದರೆ, ನಾನು ಬರೆದದ್ದೆಲ್ಲವೂ ನನ್ನ ಬಾಲ್ಯ ಕಾಲದೊಳಗೆ ನನ್ನನ್ನು ಮರುಗಾಣಿಸಿಕೊಳ್ಳಲಷ್ಟೇ. ಆದರೆ, ಅದನ್ನು ದೊಡ್ಡವರು ಓದುವಂತೆ ಮಕ್ಕಳೂ ಓದುತ್ತಿದ್ದಾರೆ, ಅದು ನನ್ನ ಅದೃಷ್ಟ.

